ಈ) ಉಡುಪಿ ತಾಲ್ಲೂಕಿನ ಎಲ್ಲಾ ಉಪ್ಪು ನೀರು ತಡೆ ಅಣೆಕಟ್ಟು ಹಲವಾರು ವರ್ಷಗಳಿಂದ ದುರಸ್ತಿಯಾಗದಿರಲು ಕಾರಣವೇನು ?

ಉ) ಹಾಗಿದ್ದಲ್ಲಿ, ಈ ಎಲ್ಲಾ ಅಣೆಕಟ್ಟುಗಳನ್ನು ಯಾವಾಗ ದುರಸ್ತಿ ಮಾಡಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಕಾಮಗಾರಿಯು ಕೆಲವು ತಾಂತ್ರಿಕ ಕಾರಣಗಳಿಂದಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡದೆ ಕೃಷಿಕರಿಗೆ ತೊಂದರೆಯಾಗಿರುವುದು ಗಮನಕ್ಕೆ ಬಂದಿರುತ್ತದೆ.

ಆ) ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಆದರೂ ಪೂರ್ಣವಾಗಿ ಪ್ರಯೋಜನವಾಗಿಲ್ಲ.

ಇ) ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಉ) } ದುರಸ್ತಿ ಕೆಲಸಗಳನ್ನು ಆಧ್ಯತೆ ಹಾಗೂ ಹಣದ ಲಭ್ಯತೆಯ ಮೇಲೆ ಹಂತ ಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ.

ಕಾಪು ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾದ ಕಾಮಗಾರಿಗಳು ಸ್ಥಗಿತಗೊಂಡಿರುವ ಬಗ್ಗೆ

೪೦೫. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಕಾಪು ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾಗಿರುವ ಎಲ್ಲಾ ಕಾಮಗಾರಿ ಕೆಲಸಗಳು ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಅನೇಕ ವರ್ಷಗಳಿಂದ ಭಾಕಿ ಇರುವ ಕೆಲವು ಮುಖ್ಯ ಕೆಲಸಗಳನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಮಂಜೂರಾದ ಕಾಮಗಾರಿಗಳು ಯಾವುದನ್ನು ನಿಲ್ಲಿಸಿಲ್ಲ.

ಆ) (ಅ) ನಲ್ಲಿ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) ಮಂಜೂರಾಗದೆ ಇರುವ ಇತರ ಮುಖ್ಯ ಕೆಲಸಗಳನ್ನು ಹಣಕಾಸಿನ ಲಭ್ಯತೆಗನುಗುಣವಾಗಿ ತೆಗೆದುಕೊಳ್ಳುವುದನ್ನು ಪರ್ಯಾಲೋಚಿಸಲಾಗುವುದು.

ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಕೆಲಸ ಮಾಡುವ ನೌಕರರ ಬಗ್ಗೆ

೬೫೪. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಮುಖ್ಯ ಮಂತ್ರಿಗಳ ಸಚಿವಾಲಯದಲ್ಲಿ ಒಟ್ಟು ಅಧಿಕಾರಿಗಳ ಮತ್ತು ನೌಕರರ ಸಂಖ್ಯೆ ಎಷ್ಟು?

ಆ) ಆ ಪೈಕಿ ಬ್ರಾಹ್ಮಣ ಜನಾಂಗದವರು ಎಷ್ಟು ಮತ್ತು ಇತರ ಜನಾಂಗದವರು ಎಷ್ಟು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೮೬.

ಆ) ಬ್ರಾಹ್ಮಣ ಜನಾಂಗದವರು–೨೩.
ಇತರರು ಜನಾಂಗದವರು–೬೩.